## 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

# MVC. No.950/2025

ಪಿ.ಡಬ್ಲ್ಯೂ. 1

ದಿನಾಂಕಃ **09.04.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ಶ್ರೀ ಕೆ.ಎಸ್.ಪಿ. ವಕೀಲರಿಂದ**

ಅಚಾರ್ ಗುಡ್ಲು ಗ್ರಾಮದ ಬಳಿ ಈ ಅಪಘಾತವು ನಡೆದಿರುತ್ತದೆ. ಆ ಸ್ಥಳದಲ್ಲಿ ರಸ್ತೆ ತಿರುವು ಇರುತ್ತದೆ. ಅಪಘಾತವು ಬಸ್ ಮತ್ತು ಕಾರಿನ ಮಧ್ಯೆ ಆಗಿರುತ್ತದೆ. ನಾನು ಆ ದಿನ ಕಾರಿನಲ್ಲಿ ಹೋಗುತ್ತಿದ್ದೆ. ಎರಡೂ ವಾಹನಗಳು ಎದುರು ಬದರಿಗೆ ಬರುತ್ತಿತ್ತು. ಕಾರಿನ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಕಾರನ್ನು ಚಾಲನೆ ಮಾಡಿ ನಿಯಂತ್ರಣ ತಪ್ಪಿ ಬಸ್‌ಗೆ ಗುದ್ದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು ಕಾರಿನ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಕಾರಿನ ಚಾಲಕ ಸರಿಯಾಗಿ ಜಾಗರೂಕತೆಯಿಂದ ಕಾರನ್ನು ಚಲಾಯಿಸಿದರೆ ಅಪಘಾತ ನಡೆಯುತ್ತಿರಲಿ ಲ್ಲ ಎಂದರೆ ಸರಿಯಲ್ಲ. ಅಪಘಾತವು ಬಸ್ನ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಕಾರಿನ ಮಾಲೀಕರನ್ನು ಈ ಕೇಸಿನಲ್ಲಿ ಎದುರುದಾರರಾಗಿ ಸೇರಿಸಿರುವುದಿಲ್ಲ. ಕಾರಿನ ಇನ್ಸೂರೆನ್ಸ್ ಕಂಪಯರವನ್ನು ಎದುರುದಾರರಾಗಿ ಮಾಡಿದ್ದೀರಾ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಅನ್ನುತ್ತಾರೆ. ಕೆಎಸ್ಆರ್.ಟಿ.ಸಿ ಬಸ್ ತುಮಕೂರು ಡಿಪೋ ಗೆ ಸಂಬಂಧಿಸಿದಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಬಸ್ ನೆಲಮಂಗಲ ಡಿಪೋ ಗೆ ಸೇರಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರ ಮಾಲೀಕರು ಎಂಡಿ ಕೆಎಸ್ಆರ್.ಟಿ.ಸಿ ಶಾಂತಿನಗರ ಇರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

ನನಗೆ 45 ವರ್ಷ ವಯಸ್ಸು ಇರುತ್ತದೆ ಎನ್ನುವುದನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆದರೆ ಶಾಲಾ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹಾಲಿನ ವ್ಯಾಪಾರವನ್ನು ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿಲ್ಲ. ನನಗೆ 1 ತಿಂಗಳಿಗೆ 25 ಸಾವಿರ ಆದಾಯ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. 1 ತಿಂಗಳು ಒಳರೋಗಿಯಾಗಿ ಆಸ್ಪತ್ರೆಯಲ್ಲಿ

ಚಿಕಿತ್ಸೆ ಪಡೆದಿದ್ದೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ನಂತರ ವಿಮಾ ಪಾಲಿಸಿಯಲ್ಲಿ 2 ಲಕ್ಷ ರೂ ಪರಿಹಾರವನ್ನು ನಾನು ಪಡೆದಿರುತ್ತೇನೆ. ಸುಳ್ಳು ವೈದ್ಯಕೀಯ ಬಿಲ್ ಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದಿತ್ತು ಎಂದರೆ ಸರಿಯಲ್ಲ. ನನಗೆ ಮೊದಲಿನ ಹಾಗೇ ದಿನ ನಿತ್ಯ ಕೆಲಸಗಳನ್ನು ಮಾಡಿಕೊಳ್ಳಲು ಈಗ ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೇ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಬಸ್ ನ ಮೇಲೆ ಸುಳ್ಳು ದೂರನ್ನು ಕಾರಿನ ಮಾಲೀಕರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ದೂರಿನ ಆದಾರದ ಮೆಏಲೆ ಈ ಪರಿಹಾರದ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು

**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

MVC. No. **781/2021**

ಪಿ.ಡಬ್ಲ್ಯು. **1**

ದಿನಾಂಕಃ**07.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಎದುರುದಾರರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು